# ಸುರತ್ಕಲ್ ಎನ್ಐಟಿಕೆ: ಅಂಬೇಡ್ಕರ್ ಜಯಂತಿ ಆಚರಣೆ

**ಸುರತ್ಕಲ್, ಎ. 14:** ಡಾ। ಬಿ.ಆರ್.ಅಂಬೇಡ್ಕರ್ ಅವರ 132ನೇ ಜನ್ಮ ದಿನವನ್ನು ಸುರತ್ಕಲ್ ಎನ್ಐಟಿಕೆ ಎಸ್‌ಸಿಎಸ್‌ಟಿ ಸೆಲ್ ವತಿಯಿಂದ ಎನ್ಐಟಿಕೆ ಕ್ಯಾಂಪಸ್‌ನಲ್ಲಿ ಆಚರಿಸಲಾಯಿತು.

ಮಂಗಳೂರಿನ ವಾಣಿಜ್ಯ ತೆರಿಗೆ ಇಲಾಖೆಯ ಪಶ್ಚಿಮ ವಲಯದ ಜಂಟಿ ಆಯುಕ್ತ (ಜಾರಿ) ಡಾ। ಕುಮಾರ್ ನಾಯಕ್ ಐ. ಮಾತನಾಡಿ, ಅಸ್ಪೃಶ್ಯ ನಿರ್ಮೂಲನೆ ಮತ್ತು ದೀನದಲಿತರಿಗೆ ಮೀಸಲಾತಿ ವ್ಯವಸ್ಥೆಯಂತಹ ಭಾರತೀಯ ಸಂವಿಧಾನಕ್ಕೆ ಡಾ। ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆಗಳು ಭಾರತೀಯ ಸಮಾಜದ ಮೇಲೆ ಆಳವಾದ ಪ್ರಭಾವ ಬೀರಿವೆ ಎಂದರು.

ಎನ್ ಐಟಿಕೆ ಸುರತ್ಕಲ್ ನ ಪ್ರಭಾರ ನಿರ್ದೇಶಕ ಪ್ರೊ। ಜಿ.ಸಿ. ಮೋಹನ್ ಕುಮಾರ್, ಎನ್ಐಟಿಕೆಯ ಎಸ್ಸಿ ಎಸ್ಟಿ ಘಟಕದ ಸಂಪರ್ಕಾಧಿಕಾರಿ ಡಾ। ನಾಗೇಂದ್ರಪ್ಪ, ಎನ್ಐಟಿಕೆ ಡೀನ್



ವಿದ್ಯಾರ್ಥಿ ಕಲ್ಯಾಣ, ಪ್ರೊ। ನರೇಂದ್ರನಾಥ್ ಎಸ್., ಎನ್ ಐಟಿಕೆ ಬೋಧಕ, ಬೋಧಕೇತರ ಸಿಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶೈಕ್ಷಣಿಕ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಲವಾರು ಎನ್ಐಟಿಕೆ ಬೋಧಕ ಸಿಬಂದಿಯನ್ನು ಗೌರವಿಸಲಾಯಿತು. ವಿವಿಧ ಮಾಹಿತಿಗಳುಳ್ಳ ಎಸ್ಸಿ ಎಸ್ಟಿ ಸೆಲ್ ಮೀಸಲಾದ ವೆಬ್ ಸೈಟ್ ಪ್ರಾರಂಭಿಸಲಾಯಿತು.

Udayavani, Date : 15/04/23 p, no -03